(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಸರ್ಕಾರದಲ್ಲಿ ಅನ್ಯಾಯವಾಗಿದೆ, ಅದಕ್ಕೆ ನಾವು ನಿಮಗೆ ಅನ್ಯಾಯ ಮಾಡುತ್ತೇವೆಂದು ಹೇಳುವುದು ಇದಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು. ಈಗ ಬೇಡಿಕೆ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ ಸಾಕು.

(ಗೊಂದಲ)

ಅಧ್ಯಕ್ಷರು: ಈಗ ಬೇಡಿಕೆ ಮಂಡಿಸಿ.

(ಗೊಂದಲ)

6. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಯ ಮಂಡನೆ

ಬೇಡಿಕೆ ಸಂಖ್ಯೆ:01 – ಕೃಷಿ ಮತ್ತು ತೋಟಗಾರಿಕೆ

ಶ್ರೀ ಕೃಷ್ಣಭೈರೇಗೌಡ(ಕೃಷಿ ರಾಜ್ಯ ಸಚಿವರು) ಮತ್ತು ತೋಟಗಾರಿಕೆ ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31–03–2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆಗಳ ಕ್ರಮಾಂಕ 01– "ಕೃಷಿ ಮತ್ತು ತೋಟಗಾರಿಕೆ" ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 531800.59 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 7900.28 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಈ ಸಭೆಯು ಮಾಡಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

(ಗೊಂದಲ)

ಅಧ್ಯಕ್ಷರು: ನಾನು name ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಈಗ ಬೇಡಿಕೆ ಮೇಲೆ ಚರ್ಚೆ ಮಾಡುವವರು ಯಾರಿದ್ದೀರಿ, ಮಾಡಿ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಮಾಡಿ.

(ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಯಾವುದೇ ವಿಚಾರವನ್ನಾದರೂ ಕೂಡ, ಇದನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗಬಹುದು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹಣ ಇಲ್ಲ ಏನೂ ಇಲ್ಲ, ಹಣ ಇಲ್ಲದೆ ಮಾನ್ಯ ಮಂತ್ರಿಯವರು ಹೇಗೆ ಸರಿಮಾಡುತ್ತಾರೆ?

(ಗೊಂದಲ)

(ಮಾನ್ಯ ಸದಸ್ಯರಾದ ಕಾಗೇರಿಯವರು ಸದನದ ಬಾವಿಯಿಂದ ಮಾತನಾಡಿದರು)

ಶ್ರೀ ಎಂ.ಹೆಚ್. ಅಂಬರೀಶ್ (ವಸತಿ ಸಚಿವರು): ಕಾಗೇರಿಯವರೆ, ನಿಮಗೆ ಆಗಲೇ ನಾನು ಹೇಳಿದನಲ್ಲ. ನಿಮಗೆ ಎಷ್ಟು ಬೇಕು, ನಿಮ್ಮ ಅವಶ್ಯಕತೆ ಎಷ್ಟಿದೆ ಎಂದು ಕೊಡಿ, ನಾನು ನನ್ನ ಬಜೆಟ್ ಅನ್ನು ನೋಡಿಕೊಂಡು, ಜೊತೆಗೆ ಎಷ್ಟು ಕೊಡುವುದಕ್ಕೆ ಸಾಧ್ಯವಿದೆ, ಅಷ್ಟನ್ನೂ ನಿಮಗೆ ಮಾಡಿಕೊಡುತ್ತೇನೆ, ನಿಮಗೆ ಅನ್ಯಾಯವಾಗದಿದ್ದ ಹಾಗೆ ಎಂದು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಬಜೆಟ್ ಇಲ್ಲವಲ್ಲ.

(ಗೊಂದಲ)

ಶ್ರೀ ಎಂ.ಹೆಚ್. ಅಂಬರೀಶ್: ಕೊಡೋಲ್ಲ ಎಂದು ನಾನು ಹೇಗೆ ಹೇಳುವುದಕ್ಕೆ ಸಾಧ್ಯ? 15 ಲಕ್ಷ ಮನೆಯನ್ನೂ ಕಾಂಗ್ರೆಸ್‌ನವರೇ ಕಟ್ಟುತ್ತಾರೆಯೇ? ಕಟ್ಟುವುದಿಲ್ಲ. ನೀವೂ ಕಟ್ಟಬೇಕಾಗುತ್ತದೆ. ನಿಮಗೂ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಎಂ.ಹೆಚ್. ಅಂಬರೀಶ್: ಇದನ್ನು ನಾನು ಕೊಡುತ್ತೇನೆಂದು ಹೇಳಿದ ಮೇಲೆ ಸ್ವಲ್ಪ ವಿಶ್ವಾಸ ನಮ್ಮ ಮೇಲೂ ಇರಲಿ. ಎಲ್ಲರಿಗೂ ಕೊಡುತ್ತೇನೆಂದು ಹೇಳಿದ್ದೇನೆ. ನಿಮಗೆಲ್ಲರಿಗೂ ನಿಮ್ಮ ಬೇಡಿಕೆ ಏನಿದೆ ಕೊಡುತ್ತೇನೆ, ಬಿಡಿ ಅದನ್ನು, ನೀವು ಅಕಸ್ಮಾತ್

last year ಕೊಟ್ಟಿರುವುದಾದರೆ ಹಣ ಇಲ್ಲದೇ ಕೊಟ್ಟಿದ್ದಾರೆ. ನಾವು ಹಣ ಇಟ್ಟುಕೊಂಡು ಕೊಡುತ್ತೇವೆಂದು ಸ್ವಲ್ಪ specific ಆಗಿ ಹೇಳುತ್ತಿದ್ದೇನೆ. ಹಣವನ್ನು ನನ್ನ ಶಕ್ತಿಗೆ ಮೀರಿ ಕೊಡುವುದಕ್ಕಾಗುವುದಿಲ್ಲ. ನನ್ನ ಶಕ್ತಿ ಎಷ್ಟಿದೆ ಅಷ್ಟಕ್ಕೇ ಕೊಡುತ್ತೇನೆಂದು ಹೇಳಿದ್ದೇನೆ, ಕೊಡುತ್ತೇನೆ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ವಸತಿ ಸಚಿವರೆ, ಈ ಸದನದಲ್ಲಿಯೇ ಆಗಿಬೇಕು. ಈ ಸದನ ಮುಗಿಯುವುದರೊಳಗೆ ಮನೆಗಳನ್ನು ಕೊಡಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ವಸತಿ ಸಚಿವರು ಭರವಸೆ ಕೊಡಲಿ, ಈ ಸದನದಲ್ಲಿ clear ಮಾಡಬೇಕು.

ಶ್ರೀ ಎಂ.ಹೆಚ್. ಅಂಬರೀಶ್: ಬಜೆಟ್ ಆದ ತಕ್ಷಣ next one weekನಲ್ಲಿ clear ಮಾಡುತ್ತೇನೆ

(ಗೊಂದಲ)

(ಈ ಹಂತದಲ್ಲಿ ಸದನದ ಬಾವಿಯಿಂದ ಬಿ.ಜೆ.ಪಿ ಸದಸ್ಯರುಗಳು ತಮ್ಮ ತಮ್ಮ ಆಸನಗಳಿಗೆ ಹಿಂತಿರುಗಿದರು)

ಶ್ರೀ ಕೆ.ಜಿ.ಬೋಪಯ್ಯ: ಈಗ ಶೂನ್ಯ ವೇಳೆ ತೆಗೆದುಕೊಳ್ಳಿ.

ಅಧ್ಯಕ್ಷರು: ಇಲ್ಲ, ಇವತ್ತು ಆಯಿತು. ನಾಳೆ ತೆಗೆದುಕೊಳ್ಳೋಣ.

ಶ್ರೀ ಗೋವಿಂದ ಎಂ.ಕಾರಜೋಳ: ಒಂದು ಮುಖ್ಯವಾದ ವಿಷಯವನ್ನು ಸದನದ ಗಮನಕ್ಕೆ ತರುತ್ತೇನೆ. ಜೂನಿಯರ್ ಇಂಜಿನಿಯರ್ ಒಬ್ಬ ನಿನ್ನೆ ಸೀಮೆ ಎಣ್ಣೆ ಸುರಿದುಕೊಂಡು ಸತ್ತಿದ್ದಾನೆ.

ಅಧ್ಯಕ್ಷರು: No, ನಾಳೆ ನೋಡೋಣ, ಇವತ್ತು ಬೇಡ.

ಶ್ರೀ ಗೋವಿಂದ ಎಂ.ಕಾರಜೋಳ: ಇದು ಬಹಳ ಮಹತ್ವವಿದೆ. ಒಬ್ಬ ಸರ್ಕಾರಿ ನೌಕರ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆಂದರೆ, ಹೇಗೆ?

ಅಧ್ಯಕ್ಷರು: ನೋಡ್ರೀ, ಈಗ ನೋಟಿಸ್ ಕೊಟ್ಟಿದ್ದೀರಿ. ಆಗುವುದಿಲ್ಲ. ಬೆಳಗ್ಗೆ ಕೊಟ್ಟಿದ್ದರೆ ನೋಡಬಹುದಾಗಿತ್ತು.

ಶ್ರೀ ಗೋವಿಂದ ಎಂ ಕಾರಜೋಳ: ಸರ್, ಅದು ಬಹಳ important issue ಇದಕ್ಕೆ ಅವಕಾಶ ಮಾಡಿಕೊಡಿ ಸರ್.

ಅಧ್ಯಕ್ಷರು: ನಾಳೆ ಕೊಡೋಣ.

7. 2014–15ನೇ ಸಾಲಿನ ಅನುದಾನ ಬೇಡಿಕೆಯ ಮೇಲೆ ಚರ್ಚೆ :

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವಿ): ಮಾನ್ಯ ಸಭಾಧ್ಯಕ್ಷರೆ, ಕೃಷಿ ಸಚಿವರು ಬಜೆಟ್ ಮೇಲೆ ತಮಗೆ ಕೊಟ್ಟಿರುವ Provision demand ಅನ್ನು ನಮ್ಮ ಸದನದ ಮುಂದೆ ಈಗಾಗಲೇ ಅಧಿಕೃತವಾಗಿ ಇಟ್ಟಿದ್ದಾರೆ. ಇದರ ಮೇಲೆ ವ್ಯಾಪಕವಾಗಿ ಚರ್ಚೆ ಮಾಡಲು ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ಮೊಟ್ಟಮೊದಲನೆಯಿಂದಾಗಿ ಬಹಳ ವರ್ಷಗಳ ನಂತರ ವಿವಿಧ ಇಲಾಖೆಗಳ ಬಜೆಟ್ ಮೇಲೆ, demand ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದೊಂದು ರೀತಿ ದಾಖಲೆಯೇ.. ಅದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ನನಗೆ ಖುಷಿಯಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ತಮ್ಮ ಕಾಲದಲ್ಲೇನಿತ್ತು. ಅದನ್ನು ಪುನರುಕ್ತಿ ತರುವಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಸದನದ ಗೌರವ ಕೂಡ ಹೆಚ್ಚಾಗಿದೆ. ಸರ್ಕಾರಕ್ಕೆ ಒಂದು ರೀತಿಯಲ್ಲಿ ಈ ಬಜೆಟ್ ಅನ್ನು ಇಡೀ ವರ್ಷ ಯಾವ ರೀತಿ ನಿರ್ವಹಣೆ ಮಾಡಬಹುದು ಎನ್ನುವ ಬಗ್ಗೆ ಉಪಯುಕ್ತವಾದ ಸಲಹೆಗಳು ಕೂಡ ಈ ಸದನದ ಎರಡೂ ಕಡೆಗಳಿಂದ ಹೊರಹೊಮ್ಮುತ್ತವೆ ಎನ್ನುವ ಆಶಾಭಾವನೆಯನ್ನು ಕೂಡ ನಾನು ವ್ಯಕ್ತಪಡಿಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವಂತೆ, ಕೃಷಿ ಅತ್ಯಂತ ಮಹತ್ವದ ಒಂದು ವಿಚಾರ, ವಿಷಯ, ವಸ್ತುಸ್ಥಿತಿ, ಆಹಾರ ಎಲ್ಲವೂ ಕೂಡ ಆಗಿದೆ. ಕೃಷಿ ಬಗ್ಗೆ ಬಹಳಷ್ಟು ಚರ್ಚೆಗಳು ಕೂಡ ಆಗಿವೆ. ಕೇಂದ್ರದಲ್ಲಿ, ರಾಜ್ಯದಲ್ಲಿ ಬಹಳಷ್ಟು ಆಯೋಗಗಳೂ ಕೂಡ ರಚನೆಯಾಗಿವೆ. ಇದು ನಮ್ಮ ದೇಶದ ಬದುಕಿನ ಬೆನ್ನೆಲಬು. ನಮ್ಮ ಆರ್ಥಿಕ ಬೆನ್ನೆಲುಬು ಕೂಡ.